**ಹೋಬಳಿ ಮಟ್ಟದಲ್ಲಿ ಎಂ.ಎಸ್.ಐ.ಎಲ್. ಮದ್ಯ ಮಳಿಗೆ ಆರಂಭ**

**108 (139) ಶ್ರೀ ಎಂ. ಟಿ. ಕೃಷ್ಣಪ್ಪ** (ತುರುವೇಕೆರೆ):– ಮಾನ್ಯ ಅಬಕಾರಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ಎಂ.ಎಸ್.ಐ.ಎಲ್. ವತಿಯಿಂದ ಮದ್ಯದಂಗಡಿಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

**ಶ್ರೀ ಎಂ. ಪಿ. ರೇಣುಕಾಚಾರ್ಯ** (ಅಬಕಾರಿ ಸಚಿವರು):–

ಅ) ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

**ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಪದವಿ ಕಾಲೇಜಿಗೆ ನಿವೇಶನ**

**113 (364) ಶ್ರೀ ನೆ.ಲ. ನರೇಂದ್ರಬಾಬು** (ಮಹಾಲಕ್ಷ್ಮಿ ಲೇಔಟ್):– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ನಿವೇಶನದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನಿವೇಶನ ಕೊಟ್ಟಿದ್ದರೂ ಇಲಾಖೆಯು ವಶಕ್ಕೆ ಏಕೆ ಇನ್ನೂ ತೆಗೆದುಕೊಂಡಿರುವುದಿಲ್ಲ;

ಇ) ನಿವೇಶನವನ್ನು ವಶಕ್ಕೆ ತೆಗೆದುಕೊಳ್ಳಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ? (ಮಾಹಿತಿ ನೀಡುವುದು)

**ಡಾ॥ ವಿ. ಎಸ್. ಆಚಾರ್ಯ** (ಉನ್ನತ ಶಿಕ್ಷಣ ಸಚಿವರು):–

ಅ) ಬಂದಿದೆ

ಆ) ದಿನಾಂಕ 27–11–2010ರಂದು ಬಿಡಿಎಗೆ ಹಣ ಪಾವತಿಸಿದೆ. ಬಿಡಿಎ ಯಿಂದ ಗುತ್ತಿಗೆ ಪತ್ರ ಬಂದ ಕೂಡಲೇ ನಿವೇಶನವನ್ನು ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗುವುದು.

ಇ) ಆದಷ್ಟು ಶೀಘ್ರವಾಗಿ